ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಸಂಖ್ಯೆ:84/ನೇಮಕಾತಿ-2/2019-20

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ರವರ ಕಛೇರಿ
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ: 21.01.2021.

ವಿಷಯ: ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳಾ) ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿ ಕುರಿತು.

ಉಲ್ಲೇಖ: 1] ಅಧಿಸೂಚನೆ ಸಂಖ್ಯೆ:84/ನೇಮಕಾತಿ-2/2019-20, ದಿನಾಂಕ:18.07.2019.
2] ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ದಿ:19.11.2020.
3] ಮುಚ್ಚಳಿಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವ 02 ಅಭ್ಯರ್ಥಿಗಳಾದ ಶ್ರೀ ಬಸಪ್ಪ ಕೊರವಿ, ಮತ್ತು ಶ್ರೀ ಬಿ.ಎಂ., ಚಂಗಪ್ಪ.
4] ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಪತ್ರ ಸಂಖ್ಯೆ:ಸಿಬ್ಬಂದಿ-8/14/ಸಿಪಿ/2019, ದಿ:18.01.2021.

## ತಾತ್ಕಾಲಿಕ ಆಯ್ಕೆ ಪಟ್ಟಿ

1. ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳಾ) ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿಯನ್ನು ಉಲ್ಲೇಖಿತ ಅಧಿಸೂಚನೆಯನ್ವಯ ಕೈಗೊಳ್ಳಲಾಗಿರುತ್ತದೆ. ಸದರಿ ಹುದ್ದೆಗಳ ನೇಮಕಾತಿ ಸಲುವಾಗಿ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳಿಗೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳನ್ನು ನಡೆಸಿದ ನಂತರ ಸದರಿ ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ದಿನಾಂಕ: 05.01.2020 ರಂದು ನಡೆಸಿ, ಪೂರ್ಣಗೊಳಿಸಲಾಗಿರುತ್ತದೆ.

2. ವೃಂದ ಮತ್ತು ನೇಮಕಾತಿ (ತಿದ್ದುಪಡಿ)ನಿಯಮಗಳು, 2009 ಮತ್ತು 2016 ರಲ್ಲಿನ ನಿಯಮಗಳನ್ವಯ ಮೇಲ್ಕಂಡ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ನೇಮಕಾತಿ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿರುವ ಹುದ್ದೆಗಳಂತೆ ಮೆರಿಟ್ ಹಾಗೂ ಮೀಸಲಾತಿಯನುಸಾರ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ ಕೆಲವು ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಿದ ಕಾರಣದಿಂದ ಉಂಟಾದ ರಿಕ್ತಸ್ಥಾನಗಳಿಗೆ ಹೊಸ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಉಲ್ಲೇಖಿತ-2ರನ್ವಯ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

3. ಉಲ್ಲೇಖಿತ-2ರನ್ವಯ ಪ್ರಕಟಿಸಲಾಗಿರುವ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ 02 ಅಭ್ಯರ್ಥಿಗಳು ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್)-200 ಮತ್ತು 300 ಹುದ್ದೆಗಳ ಎರಡೂ ಆಯ್ಕೆ ಪಟ್ಟಿಗಳಲ್ಲಿ ಆಯ್ಕೆಯಾಗಿರುತ್ತಾರೆ. ಸದರಿಯವರು ಉಲ್ಲೇಖಿತ-3 ರನ್ವಯ ಸಲ್ಲಿಸಿರುವ ಮುಚ್ಚಳಿಕೆ ಪ್ರಮಾಣ ಪತ್ರದಂತೆ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್)-200 ಹುದ್ದೆಗಳ ಆಯ್ಕೆ ಪಟ್ಟಿಯಲ್ಲಿನ ಆಯ್ಕೆಗೆ ಸೇರಲು ಇಚ್ಛಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಅದರಂತೆ ಸದರಿಯವರುಗಳ ಕೋರಿಕೆಯನ್ನು ಪರಿಗಣಿಸಿ 02 ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗಿರುತ್ತದೆ.

4. ಒಬ್ಬ ಅಭ್ಯರ್ಥಿಯಾದ ಶ್ರೀ ಸೋಮೇಶ್ ಬರಗಲ್, ರವರು ಸೇವಾನಿರತ ಮಾಜಿ ಸೈನಿಕ ಮೀಸಲಾತಿಯಡಿ ಆಯ್ಕೆಯಾಗಿರುತ್ತಾರೆ. ಆದರೆ, ಸದರಿಯವರು ಸೇವಾನಿರತ ಅಭ್ಯರ್ಥಿಯಾಗಿರುವುದಿಲ್ಲವೆಂಬ ಮಾಹಿತಿಯನ್ನು ಪೊಲೀಸ್

ಆಯುಕ್ತರು, ಬೆಂಗಳೂರು ನಗರ ರವರು ಉಲ್ಲೇಖಿತ-4ರ ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ನಿಯಮಾನುಸಾರ ಸದರಿಯವರ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗಿರುತ್ತದೆ.

5. ಮೇಲ್ಕಂಡಂತೆ 03 ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಿದ ಕಾರಣ, 03 ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಗಳು ಭರ್ತಿಯಾಗದೆ ಉಳಿದಿದ್ದು, ಸದರಿ 03 ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸಿ, ಕೆಳಕಂಡ ಷರತ್ತುಗಳನ್ವಯ ಪ್ರಕಟಿಸಲಾಗಿರುತ್ತದೆ.

ಎ) ಈ ಆಯ್ಕೆ ಪಟ್ಟಿಯು ನಿಯಮಗಳನುಸಾರ ರಚಿಸಲಾಗಿರುವ ವೈದ್ಯಕೀಯ ಮಂಡಳಿಯು ನಡೆಸುವ ವೈದ್ಯಕೀಯ ಪರೀಕ್ಷೆಯ ಫಲಿತಾಂಶಗಳಿಗೆ ಒಳಪಟ್ಟಿರುತ್ತದೆ.

ಬಿ) ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಇದ್ದ ಕಾರಣದಿಂದ ಸದರಿಯವರಿಗೆ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ಕಾನೂನಾತ್ಮಕ ಹಕ್ಕು ಇರುವುದಿಲ್ಲ. ಸದರಿ ನೇಮಕಾತಿಯು ಮೇಲ್ಕಂಡಂತೆ ಹೇಳಲಾದ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಸಿ) ಈ ಆಯ್ಕೆ ಪಟ್ಟಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ / ಮಾನ್ಯ ಉಚ್ಛ ನ್ಯಾಯಾಲಯ / ಮಾನ್ಯ ಭಾರತದ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

**A. PROVISIONAL SELECT LIST FOR THE POST OF SUB-INSPECTOR OF POLICE (CIVIL) (MEN) (MERITWISE)**

| SL. NO. | APPN. NO. | ROLL NO. | NAME | MARKS SECURED | | TOTAL | SELECTED CATEGORY |
|---|---|---|---|---|---|---|---|
| | | | | P1 | P2 | | |
| 1 | 1658605 | 3741999 | ABHISHEK NADAGOUDAR | 38.5 | 116.25 | 154.75 | 3A_OTH |
| 2 | 1678602 | 3710177 | PRADEEP KUMAR H S | 28.5 | 88.875 | 117.375 | SC_EXS |

**B. PROVISIONAL SELECT LIST FOR THE POST OF SUB-INSPECTOR OF POLICE (CIVIL) (INSERVICE) (MERITWISE)**

| SL. NO. | APPN. NO. | ROLL NO. | NAME | MARKS SECURED | | TOTAL | SELECTED CATEGORY |
|---|---|---|---|---|---|---|---|
| | | | | P1 | P2 | | |
| 1 | 1677048 | 3705697 | NATARAJ | 26.5 | 38.625 | 65.125 | GM_EXS |

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ಮತ್ತು ಅಧ್ಯಕ್ಷರು,
ಪಿಎಸ್ಐ (ಸಿವಿಲ್) ನೇಮಕಾತಿ ಸಮಿತಿ,
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು.

ಪ್ರತಿಯನ್ನು: ಕಛೇರಿ ಕಡತ ಮತ್ತು ಸೂಚನಾ ಫಲಕ.

**ಪ್ರತಿಯನ್ನು ಅಭಿನಂದನೆಗಳೊಂದಿಗೆ:**

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.